ಅಲ್ಲಿ ಸೇರಿದ್ದ ಎಲ್ಲರದ್ದೂ ಅದೇ ಪರಿಸ್ಥಿತಿ. ಪೊನ್ನುಸಾಮಿಗೂ 'ಅಯ್ಯೋ ಸಿವ್ನೇ, ಯಾಕಿಂಗಾಯ್ತು' ಎನ್ನಿಸಿ ಕಣ್ಣು ಒದ್ದೆಯಾಯ್ತು.

ಆ ವೇಳೆಗೆ ಪೊನ್ನುಸಾಮಿಯ ಹೆಂಡತಿ ಚಿನ್ನಮ್ಮಳೂ ಅಲ್ಲಿಗೆ ಬಂದು ಹೆಂಗಸರ ಗುಂಪನ್ನು ಸೇರಿಕೊಂಡಳು. ಮುರುಗೇಶನ ಅಮ್ಮ ತಂಗ್ಯಮ್ಮನ ಗೋಳು ಹೇಳತೀರದು. ಮನೆಯ ಬಾಗಿಲಿನಲ್ಲಿ ಬಿದ್ದು ಬಿದ್ದು ಅಳುತ್ತಿದ್ದಳು. ಒಂದು ಸಾರಿ ದೈವವನ್ನು ಬೈದರೆ, ಮತ್ತೊಂದು ಸಾರಿ ಗಂಡನನ್ನು ಶಪಿಸುತ್ತಿದ್ದಳು. ಗಂಡನಿಂದಲೇ ಮಗ ಸತ್ತಿದ್ದು ಅನ್ನುವುದನ್ನು ಅವಳು ಹೇಳುತ್ತಿದ್ದರೆ, ಅದೇನೆಂದು ಅರ್ಥವಾಗದ ಉಳಿದ ಹೆಂಗಸರು ಅವಳನ್ನು ಸಮಾಧಾನಪಡಿಸಲು ಸಾಧ್ಯವಾಗದೆ ಕೈ ಚೆಲ್ಲಿ ಕೂತಿದ್ದರು. ಒಬ್ಬ ಹಿರಿಯ ಹೆಂಗಸು ಅವಳನ್ನು ತನ್ನೆದೆಗೆ ಒರಗಿಸಿಕೊಂಡು ಸಾಂತ್ವನ ಹೇಳುತ್ತಿದ್ದಳು. ಯಾರು ಯಾರಿಗೆ ಸಂತೈಸುವುದು? ಎಲ್ಲರಿಗೂ ಮುರುಗೇಶನ ಅಮ್ಮನಿಗಾದಷ್ಟೇ ನೋವಾಗಿತ್ತು. ಮುರುಗೇಶ ತುಂಬಾ ಚೂಟಿಯಾದ ಹುಡುಗ. ಕಾಲೋನಿಯ ಎಲ್ಲರಿಗೂ ಬೇಕಾದ ಸಹಾಯ ಮಾಡುತ್ತಾ, ಲವಲವಿಕೆಯಿಂದ ಇದ್ದವನು. ಇಡೀ ಕಾಲೋನಿಯಲ್ಲಿ ಅವನೇ ಹೆಚ್ಚು ಓದಿದ್ದವನು. ಹಾಗಾಗಿ ಏನೇ ಸಮಸ್ಯೆ ಬಂದರೂ ಅವನ ಬಳಿ ಪರಿಹಾರ ಇರುತ್ತಿತ್ತು. ತನಗಿಂತ ಕಿರಿಯ ಹುಡುಗ ಹುಡುಗಿಯರಿಗಂತೂ ಅವನು ಅಚ್ಚುಮೆಚ್ಚಿನ ಅಣ್ಣ, ಮಾರ್ಗದರ್ಶಿ ಹಾಗೂ ನಾಯಕ.

ಸಂಕಟಪಡುತ್ತಾ ದೂರದಲ್ಲಿ ಕುಳಿತಿದ್ದ ಮುರುಗೇಶನ ಅಪ್ಪ ಪೆರುಮಾಳ್‌ಗೆ ಇದು ಆಕಸ್ಮಿಕ ಸಾವಲ್ಲ ಎಂದೇ ಅನ್ನಿಸುತ್ತಿತ್ತು. ಬಹಳ ಸುಟಿಯಾದ ಹುಡುಗ ರೈಲಿಗೆ ಸಿಕ್ಕ ಅಂದರೆ ನಂಬೋಕಾಗಲ್ಲ. ಆಗ ಅವನಿಗೆ ಹಿಂದಿನ ದಿನ ನಡೆದದ್ದೆಲ್ಲಾ ನೆನಪಾಯಿತು. 'ಅಯ್ಯೋ ಎಂಥಾ ಕೆಲ್ಸ ಆಯಿತು' ಎಂದುಕೊಂಡ. ಮಗನನ್ನು ತಾನೇ ಕೊಂದ ಹಾಗಾಯ್ತೇ, ಎಂದು ಅವನ ಸಂಕಟ ಇನ್ನೂ ಹೆಚ್ಚಾಯಿತು.

ಹಿಂದಿನ ದಿನ ಅಂಗಡಿಯ ಸಾಮಾನಿನ ಬಾಕಿಯನ್ನು ಕೊಟ್ಟು ಬಾ ಎಂದು ಮುರುಗೇಶನ ಬಳಿ ದುಡ್ಡು ಕಳಿಸಿದ್ದ ಪೆರುಮಾಳು. ಮುರುಗೇಶ ಕೊಟ್ಟೂ ಬಂದಿದ್ದ. ಸಂಜೆ ಅಂಗಡಿಗೆ ಹೋಗಿ 'ದುಡ್ದು ಬಂತಲ್ಲವೇ' ಎಂದು ಕೇಳಿದಾಗ 'ಐನೂರು ರೂಪಾಯಿ ಮತ್ತೆ ಬಾಕಿ ಮಾಡಿದೆಯಲ್ಲ' ಎಂದು ಶೆಟ್ಟರು ಅಂದಿದ್ದರು. 'ಇಲ್ಲಾ ಶೆಟ್ರೇ ಪೂರಾ ಕೊಟ್ಟುಕಳ್ಸಿದ್ದೆ ನಮ್ ಹುಡುಗನ್ ತಾವ' ಎಂದು ಇವನು ಹೇಳಿದಾಗ 'ನಾನೇನು ಸುಳ್ಳು ಹೇಳ್ತೇನೆಯೇ, ನಿಮ್ ಹುಡುಗನ್ನೇ ಕೇಳು' ಎಂದು ಶೆಟ್ಟರು ರೇಗಿದ್ದರು. ಇವನು ಮನೆಗೆ ಬಂದು ಕೇಳಿದಾಗ 'ನೀನು ಏನು ಕೊಟ್ಟಿದ್ಯೋ ಅದುನ್ನ ತಗಂಡೋಗಿ ಕೊಟ್ಟು ಬಂದೆ' ಎಂದ ಹುಡುಗ. ಇವನು ಎರಡೆರಡು ಸಾರಿ ಎಣಿಸಿಯೇ ಕೊಟ್ಟಿದ್ದು. ಹಾಗಾದರೆ ಹುಡುಗ ಸುಳ್ಳು ಹೇಳ್ತಿದಾನೆ. ಐನೂರು ರೂಪಾಯಿ ಕದ್ದು ಏನೋ ಮಾಡಿದಾನೆ ಎಂದು ಪೆರುಮಾಳಿಗೆ ಸಿಟ್ಟು ಬಂದು ಹುಡುಗನನ್ನು ಚೆನ್ನಾಗಿ ಚೆಚ್ಚಿದ್ದ. ತಂಗ್ಯಮ್ಮ ಮಗನ ಪರವಾಗಿ ವಾದಿಸಿದ್ದಳು. 'ಹುಡುಗ ಅಂಥೋನಲ್ಲ, ನೀನೇ ಹೆಂಡ ಕುಡ್ದು ಹಾಳುಮಾಡಿ ಹುಡುಗನ್ ಮೇಲೆ ಹಾಕ್ತಾ ಇದೀಯಾ' ಎಂದೂ ಆರೋಪ ಮಾಡಿದ್ದಳು. ಪೆರುಮಾಳ್‌ಗೆ ಮತ್ತೂ ರೇಗಿ ಅವಳನ್ನೂ ತಳ್ಳಿ ಹುಡುಗನ ಮುಖ ಮೂತಿ ನೋಡದೆ ಹೊಡೆದಿದ್ದ.

ಪೆರುಮಾಳಿಗೆ ಖಾತ್ರಿಯಾಯಿತು, ಹುಡುಗ ತಾನೇ ಹೋಗಿ ರೈಲಿನ ಕೆಳಗೆ ಬಿದ್ದು ಸತ್ತಿರೋದು ಎಂದು. ತಾನು ದುಡುಕಿಬಿಟ್ಟೆ ಅನ್ನಿಸತೊಡಗಿತು. ಸರಿಯಾಗಿ ಲೆಕ್ಕ ಹಾಕಿಯೇ ಕೊಟ್ಟಿದ್ದ ದುಡ್ಡು ಹೇಗೆ ಕಮ್ಮಿ ಬಂತು ಹಾಗಾದ್ರೆ? ಹುಡುಗ ಸ್ವಾಭಿಮಾನಿ. ಹಾಗೆಲ್ಲಾ ದುಡ್ಡು ಕದಿಯೋನಲ್ಲ, ಎಲ್ಲೋ ಬೀಳುಸ್ಕಂಡಿರಬೇಕು. ಐನೂರು ರೂಪಾಯಿ ಹೋದ್ರೆ ಹೋಗ್ತಿತ್ತು. ಈಗ ಮಗುನ್ನೇ ಕಳೆದುಕೊಂಡ್ನಲ್ಲಾ ಎಂದು ಮರುಗತೊಡಗಿದ.

